**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

ಸಿ.ಸಿ.ನಂ. 1737/2024

ಸಿ.ಡಬ್ಲ್ಯೂ -01

ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರುಃ- ಗಿರೀಶ್

ತಂದೆಯ ಹೆಸರು ವೆಂಕಟರಾಮಯ್ಯ

ವಯಸ್ಸು 36 ವರ್ಷ

ಉದ್ಯೋಗ ವ್ಯವಸಾಯ

ವಾಸ ಹು.ದುರ್ಗ

**ಸಾಕ್ಷಿಗೆ ದಿಃ 23.06.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ದಿಃ 08.08.2024 ರಂದು ಮದ್ಯಾಹ್ನ 2 ಗಂಟೆಯ ಸಮಯದಲ್ಲಿ ಆರೋಪಿ ಸಂಘದ ಹಣ ಕಟ್ಟಬೇಕಿತ್ತು ನನಗೆ ಸಾಲ ಕೊಡಿಸು ಎಂದು ಪದೇ ಪದೇ ಕೇಳುತ್ತಿದ್ದು ನಾನು ಈಗಾಗಲೇ ಸಾಲವನ್ನು ಕೊಡಿಸಿದ್ದು ನನ್ನ ಕೈಯಿಂದ ಹಣ ಕಟ್ಟಿರುತ್ತೇನೆ ನಾನು ಸಾಲ ಕೊಡಿಸುವುದಿಲ್ಲವೆಂದು ಹೇಳಿದಕ್ಕೆ ನೀನು ಕೊಡಿಸದೆ ಹೊದರೆ ಹಳೆ ಸಾಲ ಕಟ್ಟುವುದಿಲ್ಲವೆಂದು ಗಲಾಟೆ ಮಾಡಿರುತ್ತಾರೆ. ಡೈರಿ ಹತ್ತಿರ ಗಲಾಟೆ ಮಾಡಬೇಡ ಹೊರಗಡೆ ಹೋಗಿ ಮಾತನಾಡೋಣಾ ಎಂದು ಹೇಳಿದಕ್ಕೆ ಜಗಳ ತಗೆದು ರಾಡನಿಂದ ನನ್ನ ಎಡಗಣ್ಣಿನ ಕೆಳಗೆ ಮೂಗಿಗೆ ಮತ್ತು ಬಲ ಕೆನ್ನಿಗೆ ಹೊಡೆದಿರುತ್ತಾನೆ. ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಒಂದು ಗತಿ ಕಾಣಿಸುತ್ತೇನೆಂದು ಹೇಳಿರುತ್ತಾರೆ.

ಆರೋಪಿ ನನಗೆ ಬೋಳಿ ಮಗನೆ ಎಂದು ಅವಾಚ್ಚ ಶಬ್ದಗಳಿಂದ ಬೈದಿರುತ್ತಾನೆ. ಗಲಾಟೆಯನ್ನು ಚಾಸಾ 2 ಅವರು ಬಿಡಿಸಿರುತ್ತಾರೆ. ನಂತರ ನನ್ನನ್ನು ಕರೆದುಕೊಂಡು ಹು.ದುರ್ಗ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಅಲ್ಲಿಂದ ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಅಲ್ಲಿಂದ ಬೆಂಗಳೂರಿನ ಯಲಹಂಕದ ಸ್ನೇಹಪ್ರಕಾರ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ಬಂದು ದೂರನ್ನು ನೀಡಿರುತ್ತೇನೆ. ದೂರಿಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 1 ಎಂದು ಸಹಿ ನಿ.ಪಿ 1(ಎ) ಎಂದು ಗುರುತಿಸಲಾಯಿತು. ನಂತರ ದಿಃ 09.08.2024 ರಂದು 10 ರಿಂದ 10.30 ರವರೆಗೆ ಸ್ಥಳ ಪಂಚನಾಮೆ ಮಾಡಿದ್ದು ಆ ಸಮಯದಲ್ಲಿ ಚಾಸಾ 4 ಮತ್ತು5 ಸಹ ಇದ್ದರು. ನಾನು ಹಾಜರುಪಡಿಸಿದ ರಾಡ್ ನ್ನು ಪೋಲಿಸರು ಜಪ್ತು ಮಾಡಿಕೊಂಡಿರುತ್ತಾರೆ. ಸ್ಥಳ ಪಂಚನಾಮೆಯನ್ನು ನಿ.ಪಿ 2 ಎಂದು ಸಹಿ ನಿ.ಪಿ 2(ಎ) ಎಂದು ಗುರುತಿಸಲಾಯಿತು.

ಸ್ಥಳ ಪಂಚನಾಮೆಯ ಸಮಯದಲ್ಲಿ ನಕ್ಷೆಯನ್ನು ಸಹ ತಯಾರು ಮಾಡಿದ್ದು ಅದಕ್ಕೆ ನನ್ನ ಸಹಿ ಇದ್ದು ಅದನ್ನು ನಿ.ಪಿ 3 ಎಂದು ಸಹಿ ನಿ.ಪಿ 3(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ಮತ್ತು ರಾಡನ್ನು ಗುರುತಿಸುತ್ತೇನೆ. ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು.

**ಆರೋಪಿ ಪರ ಪಾಟೀ ಸವಾಲುಃ- ಎಂ.ಎ.ಸಿ ವಕೀಲರಿಂದಃ**

ಡೈರಿಯನ್ನು ನಾನೇ ನಡೆಸುತ್ತೇನೆ. ಡೈರಿಯಲ್ಲಿ ಸಿಸಿ ಟಿವಿಯನ್ನು ಅಳವಡಿಸಲಾಗಿರುತ್ತದೆ. ಸಿಸಿ ಟಿವಿಯನ್ನು ಪೋಲಿಸರಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ಸಿಸಿ ಟಿವಿ ಹೊರಗಡೆ ಇರುತ್ತದೆ ಒಳಗಡೆ ಇರುವುದಿಲ್ಲವೆಂದು ಹೇಳುತ್ತಾರೆ. ಯಾವುದೇ ಗಲಾಟೆ ಆಗದೇ ಇರುವ ಕಾರಣ ಪೋಲಿಸರು ಸಿಸಿ ಟಿವಿ ದಾಖಲೆ ಪಡೆದಿರುವುದಿಲ್ಲ ನಾನು ಸಹ ಅದನ್ನು ಪೋಲಿಸರಿಗೆ ನೀಡಿರುವುದಿಲ್ಲ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಶೆಫ್ ಸಂಘಕ್ಕೆ ನಾನು ನೌಕರ ಆಗಿರುವುದಿಲ್ಲ. ನಮ್ಮ ಡೈರಿಗೆ ಸಂಘದಿಂದ ಬರುವ ಸುನೀಲ ಎನ್ನುವವರೊಂದಿಗೆ ಗಲಾಟೆ ಮಾಡಿರುತ್ತಾರೆ. ಹಣ ಕಟ್ಟಿಸಿಕೊಳ್ಳುವುದು ಮತ್ತು ಹಣ ನೀಡುವುದು ಸುನೀಲ ಮಾಡುತ್ತಾರೆ. ಸಾಲವನ್ನು ಆರೋಪಿ ಪಡೆದು ಕಟ್ಟದಿದ್ದಲ್ಲಿ ಸುನೀಲ ಅವರು ಆರೋಪಿಯನ್ನು ಕೇಳಬೇಕು ಎಂದರೆ ಸರಿ.

ಸಾಲವನ್ನು ಕೈಯಿಂದ ಕಟ್ಟಿರುವ ಬಗ್ಗೆ ದಾಖಲೆ ಪೋಲಿಸರಿಗೆ ನೀಡಿರುವುದಿಲ್ಲ ಕಾರಣ ಎಲ್ಲರೂ ಸಮನಾಗಿ ಹಣ ಕಟ್ಟಿರುತ್ತೇವೆಂದು ಹೇಳುತ್ತಾರೆ. ಆರೋಪಿ ಸದಸ್ಯನಾಗಿ ಹಣ ಪಡೆದ ಬಗ್ಗೆ ದಾಖಲೆಯನ್ನು ನಾನು ದೂರಿನೊಂದಿಗೆ ನೀಡಿರುವುದಿಲ್ಲ. ಈಶೆಫ್ ಸಂಘದವರು ಸಾಲ ನೀಡುವಾಗ ಬ್ಯಾಂಕ್ ಪಾಸ ಬುಕ್ ಜರಾಕ್ಸ ಮತ್ತು ಆಧಾರ ಕಾರ್ಡನ್ನು ಪಡೆದು ನೀಡುತ್ತಾರೆ ಅದಕ್ಕೆ ಜಾಮೀನಿನ ಅವಶ್ಯಕತೆ ಇರುವುದಿಲ್ಲ ಎಂದರೆ ಸಾಕ್ಷಿ ಅದಕ್ಕೆ ಎಲ್ಲರನ್ನು ಕೇಳಿಯೇ ಸಾಲ ನೀಡುತ್ತಾರೆಂದು ಹೇಳುತ್ತಾರೆ ಆರೋಪಿ ಸಂಘದಿಂದ ಯಾವುದೇ ಸಾಲ ಪಡೆದಿಲ್ಲ ಮತ್ತು ಅವರಿಗೆ ಸಾಲ ನೀಡಲು ಈಶಫ್ ಸಂಘದ ಅಧಿಕಾರಿ ಆಗಿರುವುದಿಲ್ಲವೆಂದರೆ ಸರಿಯಲ್ಲ.

ಮು. ಮಾ. ಗಳನ್ನು ಸಾಮಾನ್ಯವಾಗಿ ಡೈರಿಯಲ್ಲಿ ಹಾಲಿನ ಕ್ಯಾನನ್ನು ಬೀಗಿ ಗೊಳಿಸಲು ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ನಾನು ಗ್ರಾಹಕರಿಂದ ಹಾಲನ್ನು ಪಡೆದು ಅವರಿಗೆ ಸರಿಯಾಗಿ ಹಣ ಸಂದಾಯ ಮಾಡಿರುವುದಿಲ್ಲವೆಂದರೆ ಸರಿಯಲ್ಲ. ಆದ ಕಾರಣ ಆರೋಪಿ ಸಹ ಗ್ರಾಹಕರ ಪರವಾಗಿ ಹಣವನ್ನು ನೀಡುವಂತೆ ಕೇಳುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ಬರದೆ ಹೋದರೆ ಊರಿನ ಗ್ರಾಹಕರು ಯಾರು ಬರುವುದಿಲ್ಲವೆಂದು ಹೇಳಿ ಆತನ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಲವನ್ನು ವಸೂಲಿ ಮಾಡಲು ಈಶೆಫ್ ನ ಸುನೀಲ ಅವರು ಬಂದ ಬಗ್ಗೆ ದೂರಿನಲ್ಲಿ ಹೇಳಿರುತ್ತೇನೆ.

ಅರೋಪಿ ನನಗೆ ಯಾವುತ್ತು ಅವ್ಯಾಚ್ಚ ಶಬ್ದಗಳಿಂದ ಬೈದಿಲ್ಲ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಹಲ್ಲೆ ಆದ ಸಮಯದಲ್ಲಿ ನನಗೆ 3 ಗಾಯಗಳು ಆಗಿದ್ದವು ಎಂದು ಹೇಳುತ್ತಾರೆ. ಆರೋಪಿ ನನಗೆ ರಾಡನಿಂದ ಹೊಡೆದಿಲ್ಲ ಯಾವುದೇ ಗಾಯಗಳು ಆಗಿರುವುದಿಲ್ಲವೆಂದರೆ ಸರಿಯಲ್ಲ. ಡೈರಿಯ ಸುತ್ತ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ಡೈರಿ ಇರುವ ಸ್ಥಳ ಸರ್ಕಲ್ ಆಗಿರುತ್ತದೆ ಎಂದರೆ ಸರಿ. ಚಾಸಾ 2 ಮತ್ತು 3 ನನ್ನ ಸ್ನೇಹಿತರು. ಅವರು ನನ್ನ ಸ್ನೇಹಿತರು ಆಗಿರುವ ಕಾರಣ ಅವರು ಜಗಳ ಬಿಡಿಸಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮದ್ಯಾಹ್ನ 2 ರಿಂದ 2.30 ರ ಸಮಯದಲ್ಲಿ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ವೈದ್ಯರಿಗೆ ಹೇಳಿ ಗಲಾಟೆ ಬಗ್ಗೆ ಬರೆಸಿದ್ದೀರಾ ಎಂದರೆ ಸಾಕ್ಷಿ ವೈದ್ಯರು ಎಕ್ಸರೇ ಮಾಡಿಸಲು ಹೇಳಿದ ಕಾರಣ ಕುಣಿಗಲ್ ಗೆ ಬಂದಿರುತ್ತೇವೆಂದು ಹೇಳುತ್ತಾರೆ. ವೈದ್ಯರು ನೀಡಿದ ಚೀಟಿಯನ್ನು ಪೋಲಿಸರಿಗೆ ನೀಡಿರುವುದಿಲ್ಲ ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ಕುಣಿಗಲ್ ಆಸ್ಪತ್ರೆಗೆ 8 ಗಂಟೆಗೆ ಹೋಗಿರುತ್ತೇನೆ. ಕುಣಿಗಲ್ ಆಸ್ಪತ್ರೆಯಲ್ಲಿ 8.30 ರಿಂದ 9 ಗಂಟೆಯವರೆಗೆ ಇದ್ದೆ. ಕುಣಿಗಲ್ ಆಸ್ಪತ್ರೆಯ ವೈದ್ಯರಿಗೆ ಯಾರು ಯಾವುದರಿಂದ ಹಲ್ಲೆ ಮಾಡಿರುತ್ತಾರೆಂದು ನಾನು ಹೇಳಿರುವುಲ್ಲ. ನನಗೆ ಯಾವುದೇ ಹಲ್ಲೆ ಆಗದೇ ಇರುವ ಕಾರಣ ಚಿಕಿತ್ಸೆ ಪಡೆಯದೇ ಇರುವ ಕಾರಣ ವೈದ್ಯರಿಗೆ ಹೇಳಿರುವುದಿಲ್ಲವೆಂದರೆ ಸರಿಯಲ್ಲ.

ಎಕ್ಸರೇನ್ನು ಪೋಲಿಸರಿಗೆ ನೀಡಿರುತ್ತೇನೆ. ನನಗೆ ಯಾವುದೆ ರೀತಿಯ ಗಾಯ ಆಗಿರುವುದಿಲ್ಲ ಎಕ್ಸರೇ ಮಾಡಿಸಿರುವುದಿಲ್ಲ ವೈದ್ಯರೊಂದಿಗೆ ಸೇರಿ ಸುಳ್ಳು ಗಾಯದ ಪ್ರಮಾಣ ಪತ್ರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ನೇಹಿಪ್ರಕಾಶ ಆಸ್ಪತ್ರೆಗೆ ರಾತ್ರಿ 10.30 ಗಂಟೆಗೆ ಹೋಗಿರುತ್ತೇನೆ. ಅಲ್ಲಿ ಒಂದೆರಡು ದಿನ ಆದ ಬಳಿಕ ಬಂದಿರುತ್ತೇನೆ. ಆಸ್ಪತ್ರೆಯಲ್ಲಿಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿರುತ್ತೇನೆ. ನಾನು ಹು.ದುರ್ಗಕ್ಕೆ 2 ದಿನಗಳ ಬಳಿಕ ಅಂದರೆ 11 ನೇ ತಾರೀಖಿನಂದು ಬಂದಿರುತ್ತೇನೆ. ರಾಡನ್ನು ಆ ನೀವು ತಗೆದುಕೊಂಡು ಹೋಗಿ ಪೋಲಿಸರಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ಅವರೇ ಬಂದಿದ್ದರು ಎಂದು ಹೇಳುತ್ತಾರೆ. ಹು.ದುರ್ಗ ಕಡೆಯಿಂದ ಬಂದರೆ ಗಲಾಟೆ ಆದ ಸ್ಥಳ ಬಲಬದಿಗೆ ಬರುತ್ತದೆ. ನಕ್ಷೆಯಲ್ಲಿ ಎಡಬದಿಗೆ ಇದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ನಕಾಶೆ ಬರೆಯುವಾಗ ತಪ್ಪಾಗಿ ಬರೆಯಲಾಗಿದೆ ಎಂದು ಹೇಳುತ್ತಾರೆ. ಪೋಲಿಸರು ನಕ್ಷೆಯನ್ನು ಸ್ಥಳದಲ್ಲಿ ತಯಾರು ಮಾಡದೇ ಪೋಲಿಸರ ಠಾಣೆಯಲ್ಲಿ ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ಯಾವುದೇ ಘಟನೆ ನಡೆಯದಿದ್ದರೂ ಸಹ ನಾನು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದು ಆರೋಪಿತನಿಗೂ ಪ್ರಕರಣಕ್ಕೂ ಮತ್ತು ಮು. ಮಾ. ಗೂ ಯಾವುದೇ ಸಂಬಂಧ ಇಲ್ಲವೆಂದರೆ ಸರಿಯಲ್ಲ. ಮು. ಮಾ. ಡೈರಿಯಲ್ಲಿದ್ದು ಆರೋಪಿಯ ವಿರುದ್ದ ಪ್ರಕರಣ ದಾಖಲಿಸುವ ಉದ್ದೇಶದಿಂದ ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಹು.ದುರ್ಗ, ಕುಣಿಗಲ್ ಮತ್ತು ಬೆಂಗಳೂರು ಆಸ್ಪತ್ರೆಯಲ್ಲಿ ಯಾವುದೇ ರೀತಿಯ ಚಿಕಿತ್ಸೆ ಪಡೆದಿರುವುದಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.